# ಬೊಗಸೆ ನೀರು

■ ನಾ. ಡಿಸೋಜ



ಸಂತೋಷ್ ಸಸಿಹಿತ್ಲು

ಪಶ್ಚಿಮ ಘಟ್ಟಗಳು ಇನ್ನೇನು ಮುಗಿದವು ಅನ್ನುವಾಗ ಎದುರಾಗುವ ಒಂದು ಸಣ್ಣ ಊರು ಚಿಲುಮೆ. ಆ ಕಡೆ ಊರಿಗೆ ಮರ, ಬಳ್ಳಿ, ಹೂವು, ಬೆಟ್ಟ ಗುಡ್ಡದ ಹೆಸರನ್ನು ಇಡುವುದು ಪದ್ಧತಿ. ಅದರಂತೆ ಈ ಊರಲ್ಲಿ ಒಂದು ಚಿಲುಮೆ ಇದ್ದಿದ್ದರಿಂದ ಆ ಹೆಸರನ್ನೇ ಇರಿಸಿದ್ದರು. ಚಿಲುಮೆ ಬಳಿ ದೇವಿಯ ಒಂದು ಮಂಟಪ ಇದ್ದುದರಿಂದ ಆ ಊರಿಗೆ 'ದೇವಿ ಚಿಲುಮೆ' ಎಂದೇ ಕರೆದರು.

ಊರಿಗೆ ಆ ಹೆಸರೇ ಶಾಶ್ವತವಾಯಿತು. ಚಿಲುಮೆ ಬೆಳೆಯಿತೋ ಇಲ್ಲ ಚಿಲುಮೆಯಿಂದ ಊರು ಬೆಳೆಯಿತೋ ಹೇಳಲು ಆಗುವುದಿಲ್ಲ. ಚಿಲುಮೆಯಿಂದ ಊರಿಗೆ ಪ್ರಾಮುಖ್ಯತೆ ಅಂತೂ ಬಂದಿದೆ. ಏಕೆಂದರೆ ಚಿಲುಮೆ ಅನ್ನುವಾಗಲೆಲ್ಲ ಜನ ದೇವಿ ಅನ್ನುವ ಹೆಸರನ್ನು ಸೇರಿಸುತ್ತಾರೆ. ಹಾಗೆಯೇ ಚಿಲುಮೆ ಇರುವ ಸ್ಥಳದಲ್ಲಿ ಒಂದು ಸಣ್ಣ ಕೊಳ, ದೇವಿ ಮಂಟಪ, ನಾಗರ ಕಟ್ಟೆಯೂ ಇದೆ. ಹಾಗಾಗಿ ಈ ಊರು ಹಳೆಯದೆಂದು, ಪುರಾತನವಾದದ್ದೆಂದು ಹೇಳಬಹುದು. ವರ್ಷಕ್ಕೊಮ್ಮೆ ಅಲ್ಲಿ ಜಾತ್ರೆ ನಡೆಯುತ್ತದೆ. ಆ ಚಿಲುಮೆ ಎಂಬ ಊರಿನ ಬಗ್ಗೆ ಜನ ಹೇಳುವ ಒಂದು ಕತೆಯೂ ಇದೆ.

ತುಂಬಾ ಹಿಂದೆ ಅಲ್ಲಿ ಜಲಕಂಟಕ ಎಂಬ ರಕ್ಕಸ ಇದ್ದನಂತೆ. ಅವನು ನೆಲದ ಮೇಲಿರುವ ಏನನ್ನೂ ಮುಟ್ಟುತ್ತಿರಲಿಲ್ಲವಂತೆ. ತಪಸ್ಸು ಮಾಡಿ ಭೂಮಿಯ ಮೇಲಿರುವ ನೀರೆಲ್ಲ ತನ್ನದೇ ಎಂದು ಈಶ್ವರನಿಂದ ವರ ಪಡೆದಿದ್ದನಂತೆ. ವರ ದೊರೆತ ನಂತರ, ಈತ ನೀರನ್ನೇ ಕುಡಿಯ ತೊಡಗಿದನಂತೆ. ಮೊದಲು ಪ್ರಾಣಿ ಪಕ್ಷಿಗಳಂತೆ ಸಿಕ್ಕಿದ್ದನ್ನು ಸೇವಿಸುತ್ತಿದ್ದ. ಈಗ ನೀರನ್ನು ಮಾತ್ರ ಬಳಸತೊಡಗಿದ. ನದಿ, ಸಮುದ್ರ, ಹಳ್ಳ, ಕೆರೆ, ಝರಿ, ತಟಾಕ, ಕುಂಟೆ, ಬಾವಿ, ಚಿಲುಮೆ, ಬುಗ್ಗೆ... ಎಂದು

## ಕುಂಚ ಪ್ರಪಂಚ

### ನೀವೂ ಬರೆಯಿರಿ

'ಸುಧಾ' ಪತ್ರಿಕೆಯಲ್ಲಿ ಪ್ರಕಟವಾಗುವ 'ಎಳೆಯರ ಅಂಗಳ' ವಿಭಾಗ ಮಕ್ಕಳ ಬುದ್ಧಿ – ಭಾವ ವಿಕಾಸಕ್ಕೆ ವೇದಿಕೆ. ಅವರು ತಮ್ಮ ಸೃಜನಶೀಲ ಚಿತ್ರಕಲೆಯನ್ನೂ ಇಲ್ಲಿ ಅನಾವರಣ ಮಾಡಬಹುದು. ಚೆನ್ನಾಗಿ ಬಿಡಿಸಿದ ರೇಖಾಚಿತ್ರ, ವರ್ಣಚಿತ್ರವನ್ನು ಅವರ ಭಾವಚಿತ್ರದ ಜೊತೆ ನಮಗೆ ಕಳುಹಿಸಿಕೊಡಿ. ವಿಳಾಸ: editorsu@sudha.co.in






**ಸನಿಹಾ ಎನ್ ಆರಾಧ್ಯ**
1ನೇ ತರಗತಿ, ಜೆಎಸ್ಎಸ್ ಪಬ್ಲಿಕ್ ಶಾಲೆ ಬೆಂಗಳೂರು





**ಪ್ರಣೀತ್ ರಾವ್ ಕೆ.**
4ನೇ ತರಗತಿ
ಹಿರಿಯ ಪ್ರಾಥಮಿಕ ಶಾಲೆ
ಅಮ್ಟೂರು ಕೆದ್ಲ, ಬಂಟ್ವಾಳ